(8ನೇ ಪುಟದಿಂದ)

ತಾಜ್‌ಮಹಲ್ ಅನ್ನು 'ಮುಮ್ತಾಜಳ ಗೋರಿ' ಎಂದು ಯಾರೂ ಕರೆಯುವುದಿಲ್ಲ. ಎಲ್ಲರೂ ಅದನ್ನು ತಾಜ್‌ಮಹಲ್ ಎಂದೇ ಕರೆಯುತ್ತಾರೆ. ಹಾಗೆಯೇ ಗೋಳಗುಂಬಜ್ ಅನ್ನೂ ಅದಿಲ್‌ಶಾಹಿ ಮಹಾರಾಜನ ಗೋರಿ ಎಂದು ಯಾರೂ ಕರೆಯುವುದಿಲ್ಲ. ಎಷ್ಟೋ ಸಲ ಅದರ ಕೆಳಗೊಂದು ಗೋರಿ ಇದೆ ಎನ್ನುವುದೇ ನಮಗೆ ಮರೆತುಹೋಗುತ್ತದೆ.

ಅದೆಲ್ಲ ರಾಜ ಮಹಾರಾಜರ ಕಥೆ. ಸತ್ತವರನ್ನು ಪ್ರಜೆಗಳೆಲ್ಲ ನೆನಪಿಟ್ಟುಕೊಳ್ಳಲಿ ಎಂದೇ ಮಹಾರಾಜರು ನೂರೆಂಟು ವಿಧದ ಗುಂಬಜ್‌ಗಳನ್ನು. ಗೋರಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ.

ಆದರೆ ಸತ್ತವರ ನೆನಪಿನಲ್ಲಿ ಇದ್ದವರು ಕಟ್ಟಿಸುವ ಗೋರಿಗಳ ಕಥೆ ಬೇರೆಯೇ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಈ ರೀತಿಯ ಕಲಾತ್ಮಕ ಪ್ರೀತಿ ಗೋರಿಗಳಲ್ಲೂ ಎದ್ದು ಕಾಣುತ್ತದೆ. ಇದು ಜನಸಾಮಾನ್ಯರ ಶೈಲಿ.

ಕಲೆ ಸರ್ವಾಂತರ್ಯಾಮಿ. ಹುಟ್ಟು, ಸಾವುಗಳೂ ಅದಕ್ಕೊಂದು ನಿಮಿತ್ತ. ಇಂತಹ ಜಾಗ, ಇಂತಹ ವಸ್ತು, ಇಂತಹದ್ದೇ ಸಮಯ ಎಂಬ ಪರಿಮಿತಿಯಾಗಲೀ, ಬೇಲಿಯಾಗಲೀ ಕಲೆಗೆ ಇಲ್ಲ. ಕಲೆಗಾರನ ಮನಸ್ಸು ಇರಬೇಕಷ್ಟೆ. ಅದನ್ನೇ ಸಾಬೀತು ಪಡಿಸುವಂತಿವೆ ಈ ಗೋರಿಗಳ ಮೇಲಿನ ಕಲೆ ಅಥವಾ ಕಲಾತ್ಮಕ ಗೋರಿಗಳು.

ಸತ್ತವರನ್ನು ದಫನ ಮಾಡಿದ ಬಳಿಕ ಅವರ ಗೋರಿಯ ಮೇಲೆ, ಅವರಿಗೆ ಇಷ್ಟವಾದ ಪದಾರ್ಥಗಳು, ಇಷ್ಟವಾದ ಬೈಕ್‌ಗಳು, ಬದುಕಿದ್ದಾಗ ಅವರಿಗಿಷ್ಟವಾದ ಧಿರಿಸುಗಳು, ಅಲ್ಲದೇ ಅವರು ಬದುಕಿ ಬಾಳಿದ ಶೈಲಿಗಳನ್ನು ಕಣ್ತುಂಬಿಕೊಳ್ಳುವಂತಹ ರೂಪ ನೀಡುವುದು ಪಾಶ್ಚಾತ್ಯ ದೇಶಗಳಲ್ಲಿ ವಾಡಿಕೆಯಾಗಿದೆ. ಮುಖ್ಯವಾಗಿ ಬಹುತೇಕ ಕ್ರೈಸ್ತ ಸಮುದಾಯದವರು ಈ ರೀತಿಯ ಕಲಾ ಪರಿಪಾಠವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಇಲ್ಲಿರುವ ಕೆತ್ತನೆಗಳನ್ನೇ ಗಮನಿಸಿ. ಗೋರಿಯ ಮೇಲೆಯೇ ಮಲಗಿರುವ ಸುಂದರಿಯನ್ನೂ ಗಮನಿಸಿ. ಒಂದರಲ್ಲಂತೂ ಗೋರಿಯೊಳಗಿರುವ ಸತ್ತ ವ್ಯಕ್ತಿಯನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೇವಕನ್ಯೆಯ ಶಿಲ್ಪವೂ ಗಮನ ಸೆಳೆಯುತ್ತಿದೆ!

ಮೃತರಾದ ದಂಪತಿಯರು ತಮ್ಮ ಶಯನಗೃಹದಲ್ಲಿ ತಬ್ಬಿ ಮಲಗಿಕೊಂಡಿದ್ದ ದೃಶ್ಯವನ್ನೇ ಹೋಲುವ ಕೆತ್ತನೆಗಳೂ ಹಲವೆಡೆ ಇವೆ. ಈ ಎಲ್ಲಾ ಶಿಲೆಗಳನ್ನು ಸತ್ತವರ ಮಕ್ಕಳು ಅಥವಾ ಸಂಬಂಧಿಕರು ಮಾಡಿಸಿ ಅವರ ಆಸೆಗಳಿಗೆ ಮುಕ್ತಿ ನೀಡಿದ ತೃಪ್ತಿ ಪಡೆಯುತ್ತಾರೆ.




